ಹರಪನಹಳ್ಳಿ ಭೀಮವ್ವ

ವಿರಚಿತ

ಸಂಕ್ಷೇಪ ರಾಮಾಯಣ

ದಾಸರಪದ

ಸಂಗ್ರಾಹಕರು :ಅರವಿಂದಲೋಚನ

Rarest Archiver

ಭಾರತದ ಇತಿಹಾಸದ ಗ್ರಂಥವೆಂದು ಪರಿಗಣಿತವಾಗುವ ಗ್ರಂಥಗಳ ಸಾಲಿನಲ್ಲಿ ಮಹಾಭಾರತ ಹಾಗು ರಾಮಾಯಣ ಅತ್ಯಂತ ಪ್ರಮುಖವಾದುವು. ಮೊದಲನೆಯದು ಭಗವಾನ್ ಶ್ರೀ ವೆದವ್ಯಾಸರು ರಚಿಸಿದರೆ ಎರಡನೆಯದನ್ನು ಮಹಋಷಿ ಶ್ರೀ ವಾಲ್ಮೀಕಿಗಳು ನಾರಾದರ ಉಪದೇಶದಂತೆ ರಾಮ ಮಂತ್ರ ನಿರಂತರ ಜಪಿಸಿ ರಚಿಸಿದ ಅಜರಾಮರ ಸಂಸ್ಕೃತ ಭಾಷೆಯ "ಆದಿಕಾವ್ಯ" ಎಂದು ನಿರ್ವಿವಾದಿತ ಅಗ್ರಮಾನ್ಯ ಕೀರ್ತಿಗೆ ಪಾತ್ರವಾಗಿದೆ. ಈ ಗ್ರಂಥದ ಪಾತ್ರಗಳು ಸಜ್ಜನರ ಜೀವನಕ್ಕೆ ದಾರಿದೀಪ..
ಈ ದೇವರ ನಾಮ "ರಾಮಾವತಾರ" ದ ಸಂಕ್ಷೇಪ ಚಿತ್ರವಾದರೂ ಸಂಪೂರ್ಣ

Rarest Archiver

ಕಥೆಯನ್ನು ಹರಪನಹಳ್ಳಿಯ ಭೀಮವ್ವನವರು ಹೆಣೆದಿದ್ದಾರೆ.

Rarest Archiver

ರಾಗ : ಸರಸಾಂಗಿ (ನಾದನಾಮಕ್ರಿಯ)

ಕಂದನೆಂದೆನಿಸಿದ ಕೌಸಲ್ಯದೇವಿಗೆ,
ರಾಮ ಎನಬಾರದೆ
ಇಂದಿರಾಪತಿ ರಾಮಚಂದ್ರಗೆ,
ಶ್ರೀರಘುರಾಮ ಎನಬಾರದೆ॥1॥

ಶಿಶುವಾಗಿ ಅವತಾರ ಮಾಡಿದ
ದಶರಥನಲ್ಲಿ, ರಾಮ ಎನಬಾರದೆ
ಋಷಿಯಜ್ಞ ಸಲಹಿ ರಕ್ಕಸರನೆ
ಕೊಂದ,ಶ್ರೀರಾಮ ಎನಬಾರದೆ !2॥

ನೀಟಾಗಿ ನೆನೆ ಭಾನುಕೋಟಿತೇಜ
ಶ್ರೀರಾಮ ಎನಬಾರದೆ
ಸಾತ್ವಿಕ ದೈವವೆ ತಾಟಕಾಂತಕ ಶ್ರೀರಾಮ
ಎನಬಾರದೆ ॥ 3 ॥

Rarest Archiver

ಪಾದನಖವು ಸೋಕಿ ಪಾದನಾಶನವಾಗೆ,
ರಾಮ ಎನಬಾರದೆ
ಶ್ರೀಪತಿ ಕರುಣದಿ ಶಿಲೆಯು
ಸ್ತ್ರೀಯಾಗಲು, ರಾಮ ಎನಬಾರದೆ ॥ 4 ॥

ಸಕಲ ಸದ್ಗುಣ ಪ್ರೋಗಿ ಮಿಥಿಲಾ
ಪಟ್ಟಣದಲಿ ರಾಮ ಎನಬಾರದೆ
ತ್ರಿಪುರ ಸಂಹಾರ ತ್ರಿನೇತ್ರನ ಧನುವೆತ್ತಿ
ರಾಮ ಎನಬಾರದೆ ॥5॥

ಚೆಲ್ವೆ ಜಾನಕಿ ಮಲ್ಲಿಗೆಯ
ವನಮಾಲೆಯು ರಾಮ ಎನಬಾರದೆ
ವಲ್ಲಭಗ್ಹಾಕಲು ಫುಲ್ಲಲೋಚನೆ
ಸೀತಾರಾಮ ಎನಬಾರದೆ ॥6॥

ಮಂಗಳ ಮಹಿಮೆ ಸೀತಾಂಗನೆ ಕೊರಳಿಗೆ
ರಾಮ ಎನಬಾರದೆ

Rarest Archiver

ಮಾಂಗಲ್ಯ ಬಂಧನ ಮಾಡಿದ
ಮಹಾತ್ಮನು ರಾಮ ಎನಬಾರದೆ ॥ 7 ॥

ಜಗದೇಕ ಸುಂದರಿ ಜಾನಕಿಯನೆ ಗೆದ್ದ
ರಾಮ ಎನಬಾರದೆ
ಜಗದೀಶ ಜನಕಗೆ ಜಾಮಾತನೆನಿಸಿದೆ
ರಾಮ ಎನಬಾರದೆ ॥ 8 ॥

ಮುದ್ದು ಜಾನಕಿ ಕೂಡಿ ಅಯೋಧ್ಯಕೆ
ಬರುತಿರೆ ರಾಮ ಎನಬಾರದೆ
ಮಧ್ಯ ಮಾರ್ಗದಿ ಬಂದಿದ್ದನು ಭಾರ್ಗವ
ರಾಮ ಎನಬಾರದೆ ॥ 9 ॥

ತನ್ನ ತಾನೇ ಗೆದ್ದು ಧನ್ಯನೆಂದೆನಿಸಿದಿ
ರಾಮ ಎನಬಾರದೆ
ಬ್ರಹ್ಮ ಶಂಕರರಿಂದಿನ್ನು ಉತ್ತಮನಾದ
ರಾಮ ಎನಬಾರದೆ॥10॥

Rarest Archiver

ಪಟ್ಟಗಟ್ಟಲು ಪರಮೋತ್ಸವ ಕಾಲಕ್ಕೆ
ರಾಮ ಎನಬಾರದೆ
ದುಷ್ಟ ಕೈಕೆಯ ನಿಷ್ಠೂರ್ವಚನವ
ಕೇಳಿದ ರಾಮ ಎನಬಾರದೆ ॥ 11 ॥

ಆ ಲಕ್ಷ್ಮಿಯ ಮಾತಲಕ್ಷ್ಯವ ಮಾಡದೆ
ರಾಮ ಎನಬಾರದೆ
ಲಕ್ಷ್ಮಣ ಲಕ್ಷ್ಮಿ ಕೂಡ್ವನವಾಸ ತಿರುಗಿದ
ರಾಮ ಎನಬಾರದೆ ॥12॥

ಸೋಸಿಲಿಂದಲಿ ಸತಿ ಆದೇನೆಂದಸುರೆಯ
ರಾಮ ಎನಬಾರದೆ
ನಾಶರಹಿತ ಕಿವಿ ನಾಸಿಕನಳಿಸಿದ ಶ್ರೀ
ರಾಮ ಎನಬಾರದೆ ॥13॥

Rarest Archiver

ದಂಡಕಾರಣ್ಯದಿ ಕಂಡು ಮಾರೀಚನ್ನ
ರಾಮ ಎನಬಾರದೆ
ಹಿಂದ್ಹೋಗೆ ರಾಘವ ಬಂದ
ರಾವಣನಲ್ಲೆ ರಾಮ ಎನಬಾರದೆ ॥ 14 ॥

ಘಾತಕ ರಾವಣ ಜಗನ್ಮಾತೆನೊಯ್ಯಲು
ರಾಮ ಎನಬಾರದೆ
ಸೋತು ಜಟಾಯು ಯುದ್ಧವ ಮಾಡಿ ತಾ
ಬೀಳಲು ರಾಮ ಎನಬಾರದೆ॥15॥

ಒಲಿದು ಸುಗ್ರೀವಗೆ ವಾಲಿ ವಧೆಯ ಮಾಡಿ
ರಾಮ ಎನಬಾರದೆ
ವಾನರಗಳ ಕೂಡಿ ವಾರಿಧಿ ಕಟ್ಟಿದ
ಶ್ರೀರಾಮ ಎನಬಾರದೆ॥16॥

ಲೋಕ ಮಾತೆಯ ಲಂಕಾನಾಥ ತಾ
ಒಯ್ದಾಗ ರಾಮ ಎನಬಾರದೆ

Rarest Archiver

ಸೀತಾಕೃತಿಯನಿಟ್ಟ ಅಶೋಕ
ವನದೊಳು ರಾಮ ಎನಬಾರದೆ ॥ 17 ॥

ಮಂಡೋದರಿಯ ಗಂಡನ್ನ ದಶಶಿರಗಳ
ರಾಮ ಎನಬಾರದೆ
ಚೆಂಡನಾಡಿದ ಕೋದಂಡಪಾಣಿಯ
ಶ್ರೀರಾಮ ಎನಬಾರದೆ॥18॥

ಪ್ರೀತಿಂದ್ವಿಭೀಷಣಗೆ ಪಟ್ಟವಗಟ್ಟಿದ
ರಾಮ ಎನಬಾರದೆ
ಸೀತಾ ಸಮೇತನಾಗಿ ಸಿಂಧು ದಾಟಿದ
ರಾಮ ಎನಬಾರದೆ॥19॥

ಆದಿ ಲಕ್ಷ್ಮಿ ಕೂಡಿ
ಹೋದನಯೋಧ್ಯಕೆ ರಾಮ ಎನಬಾರದೆ
ಶ್ರೀದೇವಿ ಸಹಿತ ಪಟ್ಟಣ ಹೊಕ್ಕ
ಪಟ್ಟಾಭಿರಾಮ ಎನಬಾರದೆ ॥20॥

Rarest Archiver

ಭರತ ಸುಮಿತ್ರ ಕೌಸಲ್ಯಗೆ ಸುಖವಿಟ್ಟ
ರಾಮ ಎನಬಾರದೆ
ಮುಕ್ತಿದಾಯಕ ಮುಂದೆ ಬಿಡದೆ
ಕಾಪಾಡುವ ರಾಮ ಎನಬಾರದೆ ॥21॥

ಪತ್ನಿ ವಾರ್ತೆಯ ತಂದ ಪವನಸುತಗೆ
ಒಲಿದ ರಾಮ ಎನಬಾರದೆ
ಸತ್ಯಲೋಕದ ಆಧಿಪತ್ಯವ ಕೊಟ್ಟ ಶ್ರೀ
ರಾಮ ಎನಬಾರದೆ ॥22॥

ರಾಮ ರಾಮನು ಎಂದು ಕರೆಯೆ ಭಕ್ತಿಯ
ನೋಡಿ ರಾಮ ಎನಬಾರದೆ
ಪ್ರೇಮದಿ ತನ್ನ ನಿಜಧಾಮವ
ಕೊಡುವೋನು ರಾಮ ಎನಬಾರದೆ ॥23॥

Rarest Archiver

ಅರಸಾಗಯೋಧ್ಯವನಾಳಿ
ಯದುಕುಲದಲಿ ರಾಮ ಎನಬಾರದೆ
ಹರುಷದಿ ಭೀಮೇಶ ಕೃಷ್ಣ ನಾಗ್ಯುದಿಸಿದ
ರಾಮ ಎನಬಾರದೆ ॥24॥

||ಶ್ರೀ ಕೃಷ್ಣಾರ್ಪಣಮಸ್ತು||
||ಶ್ರೀ ಮಧ್ವೇಶಾರ್ಪಣಮಸ್ತು||

Rarest Archiver